



# ‘ಥಗ್ ಲೈಫ್’ಗೆ ಸೋಲು

ಕಮಲ್ ಹಾಸನ್ ಅಭಿನಯಿಸಿ, ಸಹ ನಿರ್ಮಾಪಕರೂ ಆಗಿರುವ ‘ಥಗ್ ಲೈಫ್’ ಚಿತ್ರವನ್ನು ಕರ್ನಾಟಕದಲ್ಲಿ ಬಿಡುಗಡೆ ಮಾಡಲು ಬಿಡಬೇಕು ಎಂದು ಸುಪ್ರೀಂ ಕೋರ್ಟ್ ಆದೇಶ ನೀಡಿದ್ದೇನೋ ಸರಿ. ಆದರೆ, ವಿತರಕ ಅರವಿಂದ್ ಅದನ್ನು ಈಗ ಬಿಡುಗಡೆ ಮಾಡುವುದರಲ್ಲಿ ಯಾವ ಪ್ರಯೋಜನವೂ ಇಲ್ಲ ಎಂದು ಕೈಚೆಲ್ಲಿದ್ದಾರೆ.

ತಮಿಳು, ತೆಲುಗು, ಹಿಂದಿ ಭಾಷೆಯಲ್ಲಿ ಏಕಕಾಲದಲ್ಲಿ 4900ಕ್ಕೂ ಹೆಚ್ಚು ಪರದೆಗಳ ಮೇಲೆ ಸಿನಿಮಾ ತೆರೆಕಂಡಿತ್ತು. ಒಂದು ವಾರ ಕಳೆಯುವಷ್ಟರಲ್ಲಿ ಪ್ರದರ್ಶಿಸುತ್ತಿರುವ ಪರದೆಗಳ ಸಂಖ್ಯೆ ಅರ್ಧಕ್ಕಿಂತ ಕಡಿಮೆ ಆಗಿದೆ. ಚಿತ್ರಮಂದಿರಗಳಿಗೆ ಬರುತ್ತಿರುವ ಪ್ರೇಕ್ಷಕರ ಸಂಖ್ಯೆಯೂ ಶೇ 17ರಷ್ಟಕ್ಕೆ ಕುಸಿದಿದೆ ಎಂದು ವಿತರಕರೇ ತಿಳಿಸಿದ್ದಾರೆ.

ಕಮಲ್ ಹಾಸನ್ ಹಾಗೂ ಮಣಿರತ್ನಂ ಇಬ್ಬರೂ ಸೇರಿ ಈ ಚಿತ್ರ ನಿರ್ಮಿಸಿದ್ದರು. ₹300 ಕೋಟಿಗೂ ಮೀರಿ ಖರ್ಚು ಮಾಡಿದ್ದರು. ಸಿಲಂಬರಸನ್ ಕೂಡ ಪ್ರಮುಖ ಪಾತ್ರದಲ್ಲಿ ತೆರೆ ಹಂಚಿಕೊಂಡಿದ್ದರು. ನಾಯಕಿ ತ್ರಿಷಾ ಅವರಿಗೂ ಚಿತ್ರದ ಮೇಲೆ ನಿರೀಕ್ಷೆ ಇತ್ತು. ಎ.ಆರ್. ರೆಹಮಾನ್ ಸಂಗೀತ ಇದ್ದುದು ಬೋನಸ್ ಎನ್ನಲಾಗಿತ್ತು. ಈ ಯಾವ ಸಂಗತಿಗಳೂ ಸಿನಿಮಾ ಗೆಲ್ಲಿಸಲು ಸಾಕಾಗಿಲ್ಲ. ಮೊದಲ ವಾರದಲ್ಲಿ ಚಿತ್ರದ ದೇಸಿ ಮಾರುಕಟ್ಟೆಯ ಗಳಿಕೆ 40 ಕೋಟಿ ಕೂಡ ದಾಟಿಲ್ಲ ಎನ್ನುತ್ತವೆ ಮೂಲಗಳು.

‘ಪೊನ್ನಿಯಿನ್ ಸೆಲ್ವನ್’ ತಮಿಳು ಸಿನಿಮಾ ಯಶಸ್ಸು ಕೂಡ ಮಣಿರತ್ನಂ ಅವರಿಗೆ ಈ ಚಿತ್ರದಲ್ಲಿ ನೆರವಿಗೆ ಬಂದಿಲ್ಲ. ■



# ಕಾಜೋಲ್ ತಾಯಿ ಕರುಳಿನ ಬೇಗುದಿ

ಕಾಜೋಲ್ ಮುಕ್ತವಾಗಿ ಮಾತಾಡುವ ನಟಿ. ನಗುವಾಗಲೂ ಅವರು ಬಿಂದಾಸ್. ಅಳೆದೂ ತೂಗಿ ಮಾತಾಡುವ ಪತಿ ಅಜಯ್ ದೇವಗನ್ ಅವರಿಗೆ ತದ್ವಿರುದ್ಧ ಎನ್ನುವಷ್ಟು ವಾಚಾಳಿ. ಆದರೆ, ಅವರಿಗೂ ತಮ್ಮ ಮಗ ಹಾಗೂ ಮಗಳನ್ನು ಬೆಳೆಸುವಾಗ ಭೇದ–ಭಾವ ಮಾಡುವುದು ಅನಿವಾರ್ಯ ಆಗಿದೆ. ಕಾಜೋಲ್ ಮಗಳು ನ್ಯಾಸಾ; ಈಗ 22ರ ಯುವತಿ. ಮಗ ಯುಗ್ ಇನ್ನೂ 14ರ ಪೋರ. ಇಬ್ಬರ ವಿಷಯದಲ್ಲಿ ತಾಯಿಯಾಗಿ ತಾವೇ ಭೇದ–ಭಾವ ತೋರುವುದು ಈ ದೇಶದಲ್ಲಿ ಮುಖ್ಯವೇ ಆಗಿಬಿಟ್ಟಿದೆ ಎಂದು ಅವರು ವಿಷಾದ ಸವರಿದಂತೆ ಸಂದರ್ಶನವೊಂದರಲ್ಲಿ ಹೇಳಿಕೊಂಡಿದ್ದಾರೆ.

ಈ ಭೇದ–ಭಾವ ಅನಿವಾರ್ಯವಾಗಿ ಇರುವುದು ಉಡುಗೆ ತೊಡುಗೆ ಹಾಗೂ ವರ್ತನೆಯ ವಿಷಯದಲ್ಲಿ. ನ್ಯಾಸಾ ಓದಿದ್ದು ಸ್ವಿಟ್ಜರ್ಲೆಂಡ್‌ನಲ್ಲಿ. ವಿಶ್ವದ ಬೇರೆ ಬೇರೆ ಸಂಸ್ಕೃತಿಯ ಜನರ ಜೊತೆಗೆ ಬೆರೆತು ಬೆಳೆದಿದ್ದ ಹುಡುಗಿ. ಓದು ಪೂರೈಸಿ ಭಾರತಕ್ಕೆ ಬಂದಾಗ ಕಾಜೋಲ್ ತಾಯಿಯಾಗಿ ಮಗಳಿಗೆ ಕೆಲವು ಸಲಹೆಗಳನ್ನು ಕೊಡಲೇಬೇಕಾಯಿತು.

ಇದು ಭಾರತ. ಇಲ್ಲಿ ಸ್ವಿಟ್ಜರ್ಲೆಂಡ್‌ನಲ್ಲಿ ಇರುವಂತೆ ಓಡಾಡಿಕೊಂಡು ಇರಲು ಆಗದು. ಬಟ್ಟೆ ತೊಡುವಾಗ ಎಚ್ಚರದಿಂದ ಇರಬೇಕು. ಸುತ್ತಮುತ್ತ ಯಾರೆಲ್ಲ ಹೇಗೆ ನೋಡುತ್ತಾರೆ, ವರ್ತಿಸುತ್ತಾರೆ ಎಂದು ಸೂಕ್ಷ್ಮವಾಗಿ ಗಮನಿಸಬೇಕು. ಸದಾ ಎಚ್ಚರಿಕೆ ಇರಲೇಬೇಕು... ಹೀಗೆ ಅವರು ಮಗಳಿಗೆ ಬೋಧನೆ ಮಾಡಿದ್ದನ್ನು ನೆನಪಿಸಿಕೊಂಡರು. ಇದು ಒಮ್ಮೆ ಹೇಳಿದ ಮಾತ್ರಕ್ಕೆ ಮುಗಿಯುವುದಲ್ಲ. ಪದೇಪದೇ ಈ ರೀತಿ ಅವರು ಎಚ್ಚರಿಕೆ ನೀಡುತ್ತಲೇ ಇರುತ್ತಾರೆ. ಇನ್ನೊಂದು ಕಡೆ ಮಗ ಯುಗ್ ಒಂದು ಬರ್ಮುಡಾ, ಒಂದು ಟಿ – ಶರ್ಟ್ ಏರಿಸಿಕೊಂಡು ಎಲ್ಲಿ ಬೇಕಾದರಲ್ಲಿ ಮುಕ್ತವಾಗಿ ಓಡಾಡಿಕೊಂಡು ಇರುತ್ತಾನೆ. ಅವನು ಜಿಮ್‌ಗೆ ಹೋಗುವಾಗ ಹಾಕುವ ಬಟ್ಟೆಯನ್ನು ಯಾವಾಗ ಬೇಕಾದರೂ ಧರಿಸಿ, ಎಲ್ಲಿ ಬೇಕೆಂದರಲ್ಲಿ ಸಲೀಸಾಗಿ ಓಡಾಡಬಹುದು. ನ್ಯಾಸಾಗೆ ಈ ಸ್ವಾತಂತ್ರ್ಯ ಇಲ್ಲ.

ತಾಯಿಯಾಗಿ ಕಾಜೋಲ್ ಅವರಿಗೆ ಮಗಳ ಮೇಲೆ ಕಾಳಜಿ ವಹಿಸುವುದು ತುಂಬಾ ಅಗತ್ಯವಾಗಿದೆ. ಅವರೇ ಹೇಳಿಕೊಳ್ಳುವಂತೆ, ನಮ್ಮ ದೇಶದಲ್ಲಿ ಏನೆಲ್ಲಾ ಅಭಿವೃದ್ಧಿ ಆಗಿದೆಯಾದರೂ ಈ ವಿಷಯದಲ್ಲಿ ರಾಜೀ ಆಗದೆ ಇರುವಷ್ಟು ಸ್ವಾತಂತ್ರ್ಯ ಹೆಣ್ಣುಮಕ್ಕಳಿಗೆ ಸಿಕ್ಕಿಲ್ಲ. ವೈಯಕ್ತಿಕವಾಗಿ ಮಕ್ಕಳು ತಮ್ಮ ಇಷ್ಟದಂತೆ ಬದುಕಬೇಕು ಎಂಬ ಆಸೆ ಇದ್ದರೂ 50 ವರ್ಷದ ಕಾಜೋಲ್ ಅವರಿಗೆ ಸಮಾಜ ಏನೆಂದುಕೊಳ್ಳುವುದೋ ಎಂಬ ಗುಂಗಿಹುಳ ಮನಸ್ಸನ್ನು ಕಾಡುತ್ತಲೇ ಇರುತ್ತದಂತೆ.

‘ಮಾ’ ಹಿಂದಿ ಸಿನಿಮಾ ಪ್ರಚಾರದ ಸಂದರ್ಭದಲ್ಲಿ ಅವರು ಹೆಣ್ಣುಮಕ್ಕಳ ಪೀಕಲಾಟಗಳ ಬಗ್ಗೆ ಮಾತಾಡಿದರು. ಅದೂ ಹೆಣ್ಣುಮಕ್ಕಳ ತಾಯಿಯ ಹೋರಾಟ ಕಥನವನ್ನು ಒಳಗೊಂಡ ಚಿತ್ರವಾಗಿದೆ. ■